ವಾಗ ಅವರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆಯೆಂದು ಅನೇಕ ಜನರು ತಮಗೆ ತಿಳಿಸಿದ್ದಾರೆ. ಆ ದಿಸೆಯಲ್ಲಿ ತಾವು ಏನು ಯೋಚನೆಮಾಡುತ್ತೀರಿ ?

ಶ್ರೀ ಕೆ. ವಿ. ಶಂಕರಗೌಡ.—ಆ ವಿಷಯದಲ್ಲಿ ಸರ್ಕಾರ ಈಗಾಗಲೇ ತೀರ್ಮಾನವನ್ನು ಕೈಗೊಂಡಿದೆ. 1968-69ನೇ ಸಾಲಿನಿಂದ ಸಂಸ್ಥಾನಾದ್ಯಂತ ಒಂದೇ ಟೆಕ್ಸ್ಟ್ ಬುಕ್ ಪ್ರಿಸ್ಕ್ರೈಬ್ ಮಾಡುವುದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ರಾಷ್ಟ್ರೀಕರಣ ಮಾಡತಕ್ಕ ಪುಸ್ತಕಗಳನ್ನು ಪ್ರಿಂಟ್ ಮಾಡಿಸುವುದನ್ನು ಕೇವಲ ಒಂದೇ ಜಾಗದಲ್ಲಿ ಅಂದರೆ, ಬೆಂಗಳೂರಿನಲ್ಲಿ ಮಾತ್ರ ಮಾಡುವುದಕ್ಕೆ ಬದಲಾಗಿ ಜಿಲ್ಲಾಮಟ್ಟಗಳಲ್ಲಿರತಕ್ಕ ಅಸೋಸಿಯೇಷನ್‌ಗಳಲ್ಲಿಯೂ ಒಂದು ಸ್ಟ್ಯಾಂಡರ್ಡ್ ನಿಗದಿ ಮಾಡಿ, ಪುಸ್ತಕಗಳನ್ನು ಪ್ರಿಂಟ್ ಮಾಡಿಸುವುದರಿಂದ ಬೇಗನೇ ಆ ಪುಸ್ತಕಗಳು ವಿದ್ಯಾರ್ಥಿಗಳಿಗೆ ದೊರೆಯುವುದಿಲ್ಲವೆ ?

ಶ್ರೀ ಕೆ. ವಿ. ಶಂಕರಗೌಡ.—ಮಿಷಿನರಿಗಳು ಎಲ್ಲೆಲ್ಲಿ ಜೆನ್ನಾಗಿವೆಯೋ ಅಲ್ಲಲ್ಲಿ ಅವನ್ನು ನೋಡಿ, ಆರ್ಡರ್ ಕೊಟ್ಟಿದ್ದೇವೆ.

ಶ್ರೀ ಸಿದ್ದಯ್ಯ ಕಾಶಿಮಠ್.—ಟೆಕ್ಸ್ಟ್ ಬುಕ್ಸ್‌ನಲ್ಲಿ ತಪ್ಪುಗಳು ಅನೇಕ ಇವೆಯೆಂದು ಹೇಳಿದ್ದಾರೆ. ತಪ್ಪುಗಳನ್ನು ಪ್ರಿಂಟ್‌ಮಾಡಿದಂಥವರ ಮೇಲೆ ಏನು ಕ್ರಮವನ್ನು ತೆಗೆದು ಕೊಂಡಿದ್ದೀರಿ ?

ಶ್ರೀ ಕೆ. ವಿ. ಶಂಕರಗೌಡ.—ಕೆಲವು ಸಂದರ್ಭಗಳಲ್ಲಿ ಪ್ರಿಟಿಂಗ್ ತಪ್ಪುಗಳು ಆಗುತ್ತವೆ, ಕೆಲವು ಫ್ಯಾಕ್ಟುಯರ್ ತಪ್ಪುಗಳೂ ಇವೆ. ಅವನ್ನು ತಿದ್ದಿದ್ದೇವೆ. ತಪ್ಪುಗಳನ್ನು ಪ್ರಿಂಟ್ ಮಾಡಿದಂಥವರಿಗೆ ವಾರ್ನಿಗ್ ಕೊಟ್ಟಿದ್ದೇವೆ.

ಶ್ರೀ ಬಿ. ದೊಡ್ಡಬೋರೇಗೌಡ.—ಸರ್ಕಾರದವರು ಈ ಕಮಿಟಿಗೆ ತಜ್ಞರನ್ನು ನೇಮಿಸುವಾಗ ಅದರಲ್ಲಿ ಉನ್ನತ ಅಧಿಕಾರಿಗಳೂ ಇದ್ದಾರೆ ಎಂಬುದಾಗಿ ಹೇಳಿದರು. ಅದರಲ್ಲಿ ಖಾಸಗಿ ಅನುಭವಸ್ಥರು ಯಾರಾದರೂ ಇದ್ದಾರೆಯೇ ? ಇದನ್ನು ಯಾವ ಆಧಾರದ ಮೇಲೆ ಮಾಡಿದ್ದೀರಿ ?

ಶ್ರೀ ಕೆ. ವಿ. ಶಂಕರಗೌಡ.—ಅದರಲ್ಲಿರುವವರು ಎಲ್ಲಾ ತಜ್ಞರೇ, ಪ್ರೊಫೆಸರ್ಸ್ ; ಖಾಸಗಿ ಯವರು ಯಾರೂ ಇಲ್ಲ. ಆಯಾ ವಿಭಾಗದಲ್ಲಿ ತಜ್ಞರಾದವರೇ ಅಲ್ಲಿ ಇದ್ದಾರೆ.

Sri DIGAMBARA RAO B. KALMANKAR.—It is not a fact that in Hyderabad Karnatak, the books are not at all availabe even after 5 or 6 months ?

Sri K. V. SHANKARA GOWDA.—So far as the Hyderabad Karnataka is concerned, I have received no complaint about the non-availability of books.

Increasing the rates of levy

100. Sri B. B. SAYANAK (Belgaum).—

Will the Minister for Food and Civil Supplies be pleased to state :—

(*a*) whether the Government has decided to increase the rates of levy on Paddy, Ragi and Jowar, if so, how much ;

(*b*) whether the Government is aware that the rates of levy on Paddy and Jowar have been increased in Maharashtra ?

A.—**Sri B. D. JATTI** (Minister for Food and Civil Supplies).—

(*a*) No, as these prices are fixed only from Crop-year to year.

(*b*) As for as this Government is aware, the Government of Maharashtra have not increased the procurement prices of Paddy and Jowar fixed in that State for the year 1967-68.

Sri B. B. SAYANAK.—May I know when the Government is going to purchase paddy, jowar and ragi in the open market for higher price and why the Government should pay higher price for levy ?

Sri B. D. JATTI.—The levy price is fixed by the Government of India in consultation with the Agricultural Price Level Committee.

ಶ್ರೀ ಬಿ. ಭಾಸ್ಕರಶೆಟ್ಟಿ.—ಮೊನ್ನೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮಾರ್ಕೆಟ್ಟಿನಲ್ಲಿ ನಾವು ಅವನ್ನು ಕೊಳ್ಳತಕ್ಕ ಪದ್ಧತಿಯನ್ನು ಆಲೋಚನೆ ಮಾಡುತ್ತೇವೆಂದು ಹೇಳಿದ್ದಾರೆ. ಬತ್ತವನ್ನು ಓಪನ್ ಮಾರ್ಕೆಟ್ಟಿನಲ್ಲಿ ಕೊಳ್ಳುವ ಬಗ್ಗೆ ನಿಮ್ಮ ನಿಲುವು ಏನು ?

Sri B. D. JATTI.—Some of the Marketing Societies are capable of purchasing in open market under certain circumstances. If there are quite a number of Marketing Societies who can purchase, we can consider it.

Sri B. P. KADAM.—Is it not a fact that the existing prices of Maharashtra are higher than the existing rates in our State ?

Sri B. D. JATTI.— Yes, Sir.

ಶ್ರೀ ಎಚ್. ಡಿ. ದೇವೇಗೌಡ.—ಉತ್ತರದಲ್ಲಿ ಲೆವಿ ದರವನ್ನು ಹೆಚ್ಚು ಮಾಡುವುದಕ್ಕೆ ಆಗುವುದಿಲ್ಲ ವೆಂದು ಹೇಳಿದೆ. ಈಗ ಮಾರ್ಕೆಟ್ಟಿನಲ್ಲಿ ಮಾರಾಟಮಾಡತಕ್ಕ ಆಹಾರಪದಾರ್ಥಗಳ ಬೆಲೆ ಲೆವಿ ರೇಟಿ ಗಿಂತ ಕಮ್ಮಿಯಾಗಿರುವುದು ಕಂಡುಬಂದಿದೆ. ಆದ್ದರಿಂದ ರೈತರಿಗೆ ಫೇರ್ ಪ್ರೈಸ್ ಸಿಗುವಮಟ್ಟಿಗೆ ಏನಾದರೂ ಪ್ರಯತ್ನಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಇದುವರೆಗೂ ಲೆವಿ ಪ್ರೈಸಿಗಿಂತ ಕೆಳಗೆ ಬಂದಿಲ್ಲ. ಒಂದುವೇಳೆ ಲೆವಿ ಪ್ರೈಸಿಗೂ ಅದಕ್ಕೂ ಒಂದೇ ಆದರೆ ಆಗ ನಾವು ಪರ್ಚೇಸ್ ಮಾಡುತ್ತೇವೆ.

ಶ್ರೀ ಎಸ್. ಶಿವಪ್ಪ.—ಸರ್ಕಾರದವರು ಹಾಕಿರತಕ್ಕ ಲೆವಿ ರೇಟನ್ನು ಯಾವ ಆಧಾರದಮೇಲೆ ನಿರ್ಧಾರ ಮಾಡಿದ್ದಾರೆ.

ಶ್ರೀ ಬಿ. ಡಿ. ಜತ್ತಿ.—ಇದು ಬಹಳ ಹಳೆಯ ಮಾತು. ಒಂದೆ ಸಮನೆ ಇದಕ್ಕೆ ನಾನು ಉತ್ತರ ಹೇಳಿದ್ದೇನೆ. ಇಂಡಿಯಾ ಸರ್ಕಾರದಲ್ಲಿ ಒಂದು ಕಮಿಷನ್ ಇದೆ. ಅದು ಅಗ್ರಿಕಲ್‌ಚರಲ್ ಪ್ರೈಸ್ ಕಮಿಷನ್. ಅವರು ಸಾಯಿಲ್, ರೈನ್‌ಫಾಲ್ ಇತ್ಯಾದಿಗಳನ್ನು ನೋಡಿಕೊಂಡು ಪ್ರೈಸ್ ಫಿಕ್ಸ್ ಮಾಡುತ್ತಾರೆ.

ಶ್ರೀ ಎಸ್. ಶಿವಪ್ಪ.—ಮಾರ್ಕೆಟ್ಟಿನಲ್ಲಿರತಕ್ಕ ದರಕ್ಕೂ, ಸರ್ಕಾರದವರು ನಿರ್ಧಾರ ಮಾಡಿರ ತಕ್ಕ ದರಕ್ಕೂ ಏನು ವ್ಯತ್ಯಾಸ ಇದೆಯೆಂಬುದನ್ನು ಗಮನಕ್ಕೆ ತೆಗೆದುಕೊಂಡು ನಿಮ್ಮ ದರವನ್ನು ನಿರ್ಧಾರ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಬಿ. ಡಿ. ಜತ್ತಿ.—ಇದರ ಬಗ್ಗೆ ಒಮ್ಮೆ ನಿರ್ಧಾರ ಮಾಡಿದಮೇಲೆ ವರ್ಷದ ಕೊನೆಯವರೆಗೂ ಅದನ್ನು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಮುಂದಿನ ವರ್ಷ ಈ ಬಗ್ಗೆ ಆಲೋಚನೆ ಮಾಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಮಂತ್ರಿಗಳು ಮಾರ್ಕೆಟಿಂಗ್ ಸೊಸೈಟಿಗಳ ಮುಖಾಂತರ ಆಹಾರ ಧಾನ್ಯಗಳನ್ನು ಕೊಳ್ಳುವ ವಿಷಯವನ್ನು ಹೇಳಿದರು. ಆ ರೀತಿ ಕೊಳ್ಳುವುದು ಸುಗ್ಗೀ ಕಾಲದಲ್ಲಿ ; ತಾವು ಯಾವಾಗಲೋ ಕೊಂಡುಕೊಂಡರೆ ಅದರಿಂದ ರೈತರಿಗೆ ಅನುಕೂಲವಾಗುವುದಕ್ಕೆ ಬದಲಾಗಿ ವರ್ತಕರಿಗೆ ಅನುಕೂಲವಾಗುತ್ತದೆ ಎಂಬುದನ್ನು ಮಾನ್ಯ ಮಂತ್ರಿಗಳು ಗಮನಿಸಿ ದ್ದಾರೆಯೇ ?

ಶ್ರೀ ಬಿ. ಡಿ. ಜತ್ತಿ.—ನುಗ್ಗಿ ಕಾಲ ನೋಡಿಕೊಂಡು ಯಾವಾಗ ಆಹಾರ ಧಾನ್ಯದ ಬೆಲೆ ಕಡಿಮೆ ಇದೆ ಎಂಬುದನ್ನೂ ನೋಡಿಕೊಂಡು ಕೊಂಡುಕೊಳ್ಳುವುದಕ್ಕೆ ಇಂಥಾ ಕಡೆ ಅವಕಾಶವನ್ನು ಕೊಟ್ಟಿದೆ ಎಂಬುದನ್ನು ನಾನು ಈಗಾಗಲೇ ಹೇಳಿದೆ. ಗಂಗಾವತಿ ಮಾರ್ಕೆಟಿಂಗ್ ಸೊಸೈಟಿಗೆ ಸಾಕಷ್ಟು ಬತ್ತ ಬರುತ್ತದೆ. ಅಲ್ಲಿ ಕೊಂಡುಕೊಳ್ಳುವುದಕ್ಕೆ ಅವಕಾಶ ಇದೆ. ಅವರು ಕೊಂಡು ಕೊಳ್ಳುತ್ತಿದ್ದಾರೆ. ಇನ್ನು ಯಾವ ಮಾರ್ಕೆಟಿಂಗ್ ಸೊಸೈಟಿಯಲ್ಲಿ ರೇಟು ಕಡಿಮೆ ಇದೆ ಅಲ್ಲಿ ಕೊಂಡು ಕೊಳ್ಳತಕ್ಕ ವಿಚಾರ ಇದೆ.

ಶ್ರೀ ಎಸ್. ಎಸ್. ಅರಕೇರಿ.—ಸೊರ್ಲಾಪುರದಲ್ಲಿ ಲೆವಿ ರೇಟು 60 ಇದೆ, ಬಜಾಪುರದಲ್ಲಿ 54 ಇದೆ, ಹೀಗಿರುವಾಗ ಪಕ್ಕದ ರಾಜ್ಯದಲ್ಲಿ ಹೆಚ್ಚಿಗೆ ರೇಟು ಇರುವುದರಿಂದ ಇದರ ಬಗ್ಗೆ ಸರ್ಕಾರದವರು ವಿಚಾರ ಮಾಡಿ ಲೆವಿ ರೇಟು ಹೆಚ್ಚಿಗೆ ಕೊಡುವುದಕ್ಕಾಗುತ್ತದೆಯೇ ?

ಶ್ರೀ ಬಿ. ಡಿ. ಜತ್ತಿ.—ಮೈಸೂರು ರಾಜ್ಯದೊಳಗಿರತಕ್ಕದ್ದು ಪ್ರೊಡ್ಯೂಸರ್ ಲೆವಿ, ಮಹಾರಾಷ್ಟ್ರದಲ್ಲಿರುವುದು ಮನಾಪಲಿ ಪ್ರೊಕ್ಯೂರ್‌ಮೆಂಟ್. ಇದರಿಂದ ಇಲ್ಲಿ ರೈತ ತನ್ನ ಮನೆಗೆ ಎಷ್ಟು ಬೇಕೋ ಅಷ್ಟನ್ನು ಇಟ್ಟುಕೊಂಡಮೇಲೆ ಅವರಿಂದ ಸರ್ಕಾರ ತೆಗೆದುಕೊಳ್ಳಬೇಕಾಗುತ್ತದೆ. ಎಂದರೆ ಅವರಲ್ಲಿರತಕ್ಕ ಸರ್‌ಪ್ಲಸ್ 25 ಪರ್ಸೆಂಟ್ ತೆಗೆದುಕೊಂಡು 75 ಪರ್ಸೆಂಟನ್ನು ಓಪನ್ ಮಾರ್ಕೆಟ್ಟಿನಲ್ಲಿ ಮಾರಾಟ ಮಾಡಲಿಕ್ಕೆ ಕೊಡುತ್ತಾರೆ. ಆದ್ದರಿಂದ ಅಲ್ಲಿಗೂ ಇಲ್ಲಿಗೂ ವ್ಯತ್ಯಾಸ ಇದೆ.

ಶ್ರೀ ಸದಾಶಿವಪ್ಪ ಪಾಟೀಲ್.—ಮಾರ್ಕೆಟಿಂಗ್ ಸೊಸೈಟಿಯಲ್ಲಿ ಒಂದು ರೇಟು ಫಿಕ್ಸ್ ಮಾಡಿದ್ದೀರಿ, ಈಗ ಜೋಳವನ್ನು ಒಂದು ಕ್ವಿಂಟಾಲಿಗೆ 56-57 ರೂಪಾಯಿಗಳಿಗೆ ಕೊಂಡುಕೊಂಡ ಮೇಲೆ ಅದನ್ನು ಸೇಲ್ ಮಾಡುವ ಕಾಲಕ್ಕೆ ಅದು 70 ರೂಪಾಯಿಗಳಿಗೆ ಬರುತ್ತದೆ. ಹಾಗಾದರೆ ಅದನ್ನು ಬಳಕೆದಾರರಿಗೆ ಯಾವ ರೇಟು ಪ್ರಕಾರ ಮಾರಾಟ ಮಾಡಬೇಕು ?

ಶ್ರೀ ಬಿ. ಡಿ. ಜತ್ತಿ.—ಈಗ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಕೊಂಡುಕೊಳ್ಳುವುದನ್ನು ಪ್ರೊಕ್ಯೂರ್‌ಮೆಂಟ್ ರೇಟಿಗೆ ಕೊಂಡುಕೊಳ್ಳುತ್ತೇವೆ. ಓಪನ್ ಮಾರ್ಕೆಟ್ಟಿನಲ್ಲಿ ಕೊಂಡುಕೊಳ್ಳುವುದನ್ನು ನೇರವಾಗಿ ಗೋಡೌನ್‌ನಲ್ಲಿ ಇಡುತ್ತೇವೆ. ಅದಕ್ಕೆ ಟ್ರಾನ್ಸ್‌ಪೋರ್ಟ್ ಚಾರ್ಜಸ್ ಮತ್ತು ಗೋಡೌನ್ ಚಾರ್ಜಸ್ ಸೇರುತ್ತದೆ. ಅದೇನು ಬಹಳ ವ್ಯತ್ಯಾಸವಾಗುವುದಿಲ್ಲ.

ಶ್ರೀ ಎಸ್. ಶಿವಪ್ಪ.—ಮಹಾರಾಷ್ಟ್ರ ಸರ್ಕಾರದವರು ಈ ಸರ್ಕಾರಕ್ಕಿಂತ ಹೆಚ್ಚಿಗೆ ಲೆವಿ ರೇಟು ಕೊಟ್ಟುಕೊಂಡರೂ ಕೂಡ ಸೆಲಿಂಗ್ ಪ್ರೈಸ್ ನಿಮ್ಮಷ್ಟೇ ಇಟ್ಟಿದ್ದಾರೆ, ಕಾರಣವೇನು ?

ಶ್ರೀ ಬಿ. ಡಿ. ಜತ್ತಿ.—ನಮ್ಮಷ್ಟು ಇಲ್ಲ, ಗೊತ್ತಿದ್ದರೆ ಹೇಳಿ.

Land Tribunal at Jamkhandi

101. Sri K. P. NADAGOUDA (Mudhol).—

Will the Minister for Revenue and Forests be pleased to state.—

(*a*) the grounds on which Jamkhandi has been selected for the establishment of a tribunal to hear tenancy matters of Mudhol, Bilgi, Bagalkot, Hungund and Badami Taluks ;

(*b*) whether they are aware that Jamkhandi is not a central place for all the above Taluks ;

(*c*) whether there is a proposal to reconsider the matter and change the place of the Tribunal to some other Taluka which is equidistant from all the above talukas ;

(*d*) whether the Government is aware that some munsiff courts in this area have not got sufficient work ;

(*e*) whether they would transfer all tenancy matters to such courts within the taluks concerned ?